೩. ಅನೇಕರು ಕಷ್ಟ ಎದುರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇಂಗ್ಲಿಷ್‌ನಲ್ಲಿ ಒಂದು ಹೇಳಿಕೆಯಿದೆ: "Suicide is permanant solution for a temporary problem." ಕಷ್ಟಗಳು, ಸಮಸ್ಯೆಗಳು ತಾತ್ಕಾಲಿಕ. ತಾಳ್ಮೆಯ ಕೊರತೆಯಿಂದಾಗಿ ಅವು ತಮ್ಮ ತಾತ್ಕಾಲಿಕತೆಯನ್ನು ಕಳೆದುಕೊಳ್ಳುತ್ತವೆ. ಆಗ ಆತ್ಮಹತ್ಯೆಯ ಆಲೋಚನೆ ಬರುತ್ತದೆ.

### ಜೀವರಲ್ಲಿ ನಾಲ್ಕು ಬಗೆ

**ಶ್ರೀರಾಮಕೃಷ್ಣರು:** "ಜೀವರಲ್ಲಿ ನಾಲ್ಕು ದರ್ಜೆಯವರಿದ್ದಾರೆ ಎಂಬುದಾಗಿ ಶಾಸ್ತ್ರದಲ್ಲಿ ಹೇಳಿದೆ : ಬದ್ಧ, ಮುಮುಕ್ಷು, ಮುಕ್ತ, ನಿತ್ಯ.

"ಈ ಜಗತ್ತು ಮೀನುಬಲೆ ಇದ್ದ ಹಾಗೆ. ಜೀವ ಮೀನು ಇದ್ದ ಹಾಗೆ. ಯಾರ ಮಾಯೆಯಿಂದ ಈ ಜಗತ್ತು ಸೃಷ್ಟಿಯಾಗಿದೆಯೋ ಆ ಭಗವಂತ ಬೆಸ್ತ ಇದ್ದ ಹಾಗೆ. ಬೆಸ್ತನ ಬಲೆಗೆ ಮೀನು ಬಿದ್ದಾಗ ಕೆಲವು ಮೀನುಗಳು ಬಲೆಯನ್ನು ಕತ್ತರಿಸಿ ಓಡಿ ಹೋಗಲು, ಅಂದರೆ ಬಂಧನದಿಂದ ಪಾರಾಗಲು ಯತ್ನಿಸುತ್ತವೆ. ಇವನ್ನೇ ಮುಮುಕ್ಷು ಜೀವಕ್ಕೆ ಹೋಲಿಸಬಹುದು. ಬಂಧನದಿಂದ ಪಾರಾಗಲು ಯತ್ನಿಸಿದ ಮೀನುಗಳಲ್ಲಿ ಎಲ್ಲವೂ ಪಾರಾಗಲಾರವು. ಎಲ್ಲೋ ಮೂರೋ ನಾಲ್ಕೋ ಮೀನು 'ದುಬ್' ಅಂತ ಶಬ್ದ ಮಾಡಿ ಓಡಿಹೋಗುತ್ತವೆ. ಆಗ ಜನ ಹೇಳುತ್ತಾರೆ: 'ಓ, ಅಲ್ಲಿ ಒಂದು ಬಹಳ ದೊಡ್ಡದು ಓಡಿಹೋಗುತ್ತಿದೆ!' ಈ ಮೂರೋ ನಾಲ್ಕೋ ಮೀನುಗಳನ್ನು ಮುಕ್ತ ಜೀವರಿಗೆ ಹೋಲಿಸಬಹುದು. ಕೆಲವು ಮೀನುಗಳು ಸ್ವಾಭಾವಿಕವಾಗಿಯೇ ಅಷ್ಟು ಎಚ್ಚರಿಕೆಯುಳ್ಳವು. ಅವು ಎಂದಿಗೂ ಬಲೆಗೆ ಬೀಳುವುದೇ ಇಲ್ಲ. ಆದರೆ ಮೀನುಗಳಲ್ಲಿ ಅಧಿಕಾಂಶ ಬಲೆಗೆ ಬೀಳುತ್ತವೆ; ಆದರೂ ಅವಕ್ಕೆ ತಾವು ಬಲೆಗೆ ಬಿದ್ದಿರುವುದರ ಮತ್ತು ಒಡನೇ ಸಾಯಬೇಕಾಗಿರುವುದರ ಪ್ರಜ್ಞೆಯೇ ಇರುವುದಿಲ್ಲ. ಬಲೆಗೆ ಬಿದ್ದೊಡನೆಯೇ ಅವು ನೇರವಾಗಿ ಬಲೆಯೊಡನೆ ಓಡಿಹೋಗಿ ಬದಿಯನ್ನು ಹೊಕ್ಕು ತಮ್ಮನ್ನು ಮರೆಮಾಚಿಕೊಳ್ಳಲು ಪ್ರಯತ್ನಮಾಡುತ್ತವೆ. ಬಂಧನದಿಂದ ಪಾರಾಗಲು ಸ್ವಲ್ಪವೂ ಪ್ರಯತ್ನಮಾಡುವುದಿಲ್ಲ. ಅದಕ್ಕೆ ಬದಲು ಬದಿಯ ಇನ್ನೂ ಆಳಕ್ಕೆ ಹೋಗುತ್ತವೆ. ಇವನ್ನೇ ಬದ್ಧಜೀವರಿಗೆ ಹೋಲಿಸಬಹುದು... ಬದ್ಧ ಜೀವರು ಜಗತ್ತಿನಲ್ಲಿ, ಎಂದರೆ ಕಾಮಕಾಂಚನದಲ್ಲಿ ಆಸಕ್ತರಾಗಿಬಿಟ್ಟಿದ್ದಾರೆ. ಕಳಂಕ ಸಾಗರದಲ್ಲಿ ಬಹಳವಾಗಿ ಮಗ್ನರಾಗಿಬಿಟ್ಟಿದ್ದಾರೆ. ಆದರೂ ಭಾವಿಸುತ್ತಾರೆ, ತಾವು ಸೌಖ್ಯದಿಂದಿದ್ದೇವೆ ಎಂಬುದಾಗಿ."
*(ಅಲ್ಲೇ, ಪು. ೧೧೯-೨೦)*

ಇಡೀ ಜಗತ್ತೇ ಒಂದು ಬಲೆ - World wide web (www). ಬಲೆಯೊಳಗೆ ಬಲೆಗಳನ್ನು ಸೃಷ್ಟಿಸಿಕೊಂಡಿದ್ದೇವೆ. **ಶಕ್ರಸ್ಯ ಜಾಲಂ** (ಇಂದ್ರನ ಬಲೆ) ಎಂಬ ಭಾವನೆ ಅಥರ್ವವೇದದಲ್ಲಿ ಬರುತ್ತದೆಯಂತೆ. "ಇಂದ್ರನ ಬಲೆಯು ಇಡೀ ಜಗತ್ತು ಒಂದು ಬಲೆ ಎಂಬುದನ್ನು ಸಂಕೇತಿಸುತ್ತಿದೆ. ಈ ಬಲೆಯಲ್ಲಿ ಪ್ರತಿಯೊಂದೂ ಪರಸ್ಪರ ಸಂಪರ್ಕವುಳ್ಳದ್ದು, ಎಲ್ಲವೂ ಪರಸ್ಪರಾವಲಂಬಿಗಳಾಗಿವೆ. ಇಲ್ಲಿ ಎಲ್ಲವೂ ಪೂರ್ಣವನ್ನು ಪ್ರತಿಬಿಂಬಿಸುವುದು ಮಾತ್ರವಲ್ಲದೆ, ಅವನ್ನು ಪೂರ್ಣದಿಂದ ಪ್ರತ್ಯೇಕಿಸಲಾಗುವುದಿಲ್ಲ... ಈ ಬಲೆಯು ಅನಂತವಾದುದೆಂದು ಹೇಳಲಾಗಿದೆ. ಅದು ಎಲ್ಲ ಕಡೆಯೂ ಹರಡಿಕೊಂಡಿರುವುದು ಮಾತ್ರವಲ್ಲದೆ, ಅದಕ್ಕೆ ಆದಿಅಂತ್ಯಗಳಿಲ್ಲ. ಬಲೆಯ ಪ್ರತಿಯೊಂದು ಗಂಟುಗಳಲ್ಲಿಯೂ ಒಂದು ರತ್ನವಿದೆ. ಆ ರತ್ನಗಳನ್ನು ಹೇಗೆ ಜೋಡಿಸಲಾಗಿದೆಯೆಂದರೆ, ಪ್ರತಿಯೊಂದು ರತ್ನವೂ ಬೇರೆಲ್ಲ ರತ್ನಗಳನ್ನು ಪ್ರತಿಬಿಂಬಿಸುತ್ತದೆ. ಯಾವ ರತ್ನವೂ ಬೇರೆಲ್ಲ ರತ್ನಗಳಿಂದ ಸ್ವತಂತ್ರವಾಗಿ ಇರಲಾರದು. ಪ್ರತಿಯೊಂದೂ ಪ್ರತಿಯೊಂದರೊಂದಿಗೆ ಸಂಬಂಧಿಸಿದೆ, ಯಾವುದೂ ಪ್ರತ್ಯೇಕವಾಗಿಲ್ಲ." *(ಹೆಚ್ಚಿನ ವಿವರಗಳಿಗೆ ರಾಜೀವ ಮಲ್ಹೋತ್ರ ಅವರ 'Indra's Net', ಪು. ೪-೬ ನೋಡಿ).*

ಇಲ್ಲಿ ಹೇಳಿರುವ ಶಕ್ರನ ಜಾಲವು ಇಂದ್ರಜಾಲವಲ್ಲ (Magic). ಇದನ್ನು ಬಂಧನದ ದೃಷ್ಟಿಯಿಂದಲೂ ಹೇಳಿರುವುದಲ್ಲ. ಈ ಜಗತ್ತು ಸಾಂಬಂಧಿಕವಾದುದು - ಇಲ್ಲಿ ಎಲ್ಲವೂ - ಚೇತನಾಚೇತನಗಳೆಲ್ಲವೂ - ಪರಸ್ಪರ ಸಂಬಂಧವುಳ್ಳವು, ಪರಸ್ಪರಾವಲಂಬಿ ಮತ್ತು ಪರಸ್ಪರ ಸಂಪರ್ಕವುಳ್ಳವು. ಯಾವುದನ್ನೂ ನಾವು ಪ್ರತ್ಯೇಕವಾಗಿ, ಇತರ ಸಂಬಂಧವಿಲ್ಲದೆ, ನೋಡಲಾಗುವುದಿಲ್ಲ, ಚಿಂತಿಸಲಾಗುವುದಿಲ್ಲ. ಈ ದೃಷ್ಟಿಯಿಂದ ಈ ವಿಶ್ವವೊಂದು ಜೀವನ ಬಲೆ (Web of Life); ನಾವೆಲ್ಲರೂ ಆ ಬಲೆಯ ವಿವಿಧ ಎಳೆಗಳು. "ಆಳ ಪರಿಸರವಿಜ್ಞಾನವು ಮನುಷ್ಯನನ್ನೇ ಆಗಲಿ, ಯಾವುದನ್ನೇ ಆಗಲಿ, ಪ್ರಾಕೃತಿಕ ವಾತಾವರಣದಿಂದ ಪ್ರತ್ಯೇಕಿಸುವುದಿಲ್ಲ. ಅದು ಜಗತ್ತನ್ನು ಬಿಡಿ ಬಿಡಿ ವಸ್ತುಗಳ ಸಂಗ್ರಹವಾಗಿ ಪರಿಗಣಿಸುವುದಿಲ್ಲ. ಬದಲಾಗಿ, ಮೂಲಭೂತವಾಗಿ ಪರಸ್ಪರ ಸಂಪರ್ಕವುಳ್ಳ, ಪರಸ್ಪರ ಅವಲಂಬಿತ ಜಗತ್‌ಜಾಲವಾಗಿ ಪರಿಗಣಿಸುತ್ತದೆ. ಆಳ ಪರಿಸರ ಜ್ಞಾನವು ಎಲ್ಲ ಜೀವಿಗಳ ಆಂತರಿಕ ಮೌಲ್ಯವನ್ನು ಗುರುತಿಸುತ್ತದೆ, ಮತ್ತು ಮಾನವರನ್ನು ಈ ಜೀವನ ಬಲೆಯ ಕೇವಲ ಒಂದು ಎಳೆಯಾಗಿ ನೋಡುತ್ತದೆ." *(Fritjof Capra, 'Web of Life', Anchor Books, New York, 1996, P.7)*

ಇಲ್ಲಿ ಶ್ರೀರಾಮಕೃಷ್ಣರು ಪ್ರಸ್ತಾಪಿಸುವ ಮಾಯಾ ಬಲೆಯಿಂದ ತಪ್ಪಿಸಿಕೊಳ್ಳಲು ನಾಗಮಹಾಶಯರಂತೆ ಅತ್ಯಂತ ಚಿಕ್ಕವರಾಗಬೇಕು, ಅಂದರೆ ಭಕ್ತಿಭಾವದಿಂದ ನಮ್ರರಾಗಬೇಕು. ಅಥವಾ ಸ್ವಾಮಿ ವಿವೇಕಾನಂದರಂತೆ ಜ್ಞಾನಶಕ್ತಿಯಿಂದ ಬೃಹತ್ತಾಗಬೇಕು. ಬೃಹತ್ತಾಗಿಯೂ ನಮ್ರತೆಯನ್ನು ಉಳಿಸಿಕೊಳ್ಳಬೇಕು. ಆಂಜನೇಯನು ಸಮುದ್ರವನ್ನು ಹಾರುವಾಗ ಅತ್ಯಂತ ಚಿಕ್ಕವನಾಗಿ ಸಿಂಹಿಣಿಯ ಬಾಯನ್ನು ಪ್ರವೇಶಿಸಿ, ಮತ್ತು ಬೃಹತ್ತಾಗಿ ಆಕೆಯ ಉದರವನ್ನು ಭೇದಿಸಿ ಹೊರಬಂದನಂತೆ. ಈ ದೃಷ್ಟಿಯಿಂಲೇ ಸ್ವಾಮಿ ವಿವೇಕಾನಂದರು ಹೇಳಿರುವುದು, "Be a king with all your humility" — ಅತ್ಯಂತ ನಮ್ರತೆಯೊಂದಿಗೆ ರಾಜನಾಗಿರು" ಎಂದು.

*(ಮುಂದುವರಿಯುವುದು)*

# ಯೋಗಮಾಯೆ

ಡಾ. ಎಸ್.ಶ್ರೀಕಂಠಶಾಸ್ತ್ರೀ

ಇತಿಹಾಸ, ಸಂಸ್ಕೃತಿ, ಧರ್ಮ, ದರ್ಶನ ಮುಂತಾದ ಕ್ಷೇತ್ರಗಳಲ್ಲಿ ಆಳವಾದ ಅಧ್ಯಯನ ಮಾಡಿದವರೂ ಅನೇಕ ಸಂಶೋಧನ ಗ್ರಂಥಗಳನ್ನು ರಚಿಸಿ ಪ್ರಸಿದ್ಧರಾದವರೂ ಆದ ಡಾ. ಎಸ್. ಶ್ರೀಕಂಠಶಾಸ್ತ್ರೀ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿ ಅನೇಕ ವರ್ಷ ಸೇವೆ ಸಲ್ಲಿಸಿದ್ದರು. ಅವರು ಶ್ರೀರಾಮಕೃಷ್ಣರನ್ನು ಕುರಿತು ಹಾಗೂ ಶಕ್ತಿಯನ್ನು ಕುರಿತು ಬರೆದ ಲೇಖನವೊಂದು ಅವರ 'ಸಂಶೋಧನ ಲೇಖನಗಳು' ಎಂಬ ಗ್ರಂಥದಲ್ಲಿ (ಪು.೩೩೪-೩೫) ಪ್ರಕಟವಾಗಿದೆ. ಈ ಲೇಖನದ ಬಗ್ಗೆ ಮಾಹಿತಿ ನೀಡಿ, ಇದನ್ನು ಪ್ರಕಟಿಸಲು ಅನುಮತಿ ನೀಡಿದ ಪ್ರೊ .ಎಸ್.ನಾಗನಾಥ್ (ಲೇಖಕರ ಪುತ್ರ) ಅವರಿಗೂ ಪ್ರಕಾಶಕರಿಗೂ ನಮ್ಮ ಕೃತಜ್ಞತೆಗಳು.



ಶ್ರೀರಾಮಕೃಷ್ಣ ಪರಮಹಂಸರ ಜೀವನಚರಿತ್ರೆಯಲ್ಲಿ ಅನಾದಿಯಾಗಿ ಭಾರತೀಯ ಸಂಸ್ಕೃತಿಯಲ್ಲಿ ಕಂಡುಬರುವ ಅನುಭವ ಸಿದ್ಧವಾದ ಆಧ್ಯಾತ್ಮಿಕ ತತ್ತ್ವಗಳಿಗೆ ನಿದರ್ಶನಗಳು ಪುನಃ ಪುನಃ ಕಂಡುಬರುವುದು ಆಶ್ಚರ್ಯವಾಗಿದೆ.

ಸರ್ವಮತ ಸಮನ್ವಯರೂಪವಾದ ಅದ್ವೈತಾನುಭೂತಿಗೆ ಪ್ರತ್ಯಕ್ಷ ದೃಷ್ಟಾಂತಗಳು ಸಿಕ್ಕುತ್ತವೆ. ಭಗವಾನ್ ಶ್ರೀ ರಾಮಕೃಷ್ಣರ ಒಂದೊಂದು ಸಾಧನೆಯಲ್ಲು ಆಯಾ ಸಂಪ್ರದಾಯ ಗ್ರಂಥಗಳಲ್ಲುಕ್ತವಾದ ತತ್ತ್ವಗಳು, ಹಂತಗಳು ನೈಸರ್ಗಿಕವಾಗಿ ಅಭಿವ್ಯಕ್ತವಾಗಿವೆ. ಶೈವ, ಶಾಕ್ತ, ವೈಷ್ಣವ, ಕ್ರೈಸ್ತ, ಬೌದ್ಧ, ಇಸ್ಲಾಂ ಪಂಥಗಳಲ್ಲಿ ವಿಧಿಸಿರುವ ಆಯಾ ಸಾಧನ ಕ್ರಮಗಳ ಫಲಗಳಿಗೆ ಜೀವಂತ ನಿದರ್ಶನಗಳು ಕಂಡುಬರುವುದರಿಂದ ಸರ್ವಮತಗಳನ್ನೊಳಗೊಂಡು ಎಲ್ಲಕ್ಕು ಅತೀತವಾದ ಅದ್ವಿತೀಯಾನುಭವವೇ ಪರಮಧ್ಯೇಯವೆಂದು ಸಿದ್ಧವಾಗಿದೆ. ಶ್ರೀ ಶಂಕರಾಚಾರ್ಯರು ಹೇಳಿದಂತೆ ಮೋಕ್ಷವು ಉತ್ಪಾದ್ಯ, ವಿಕಾರ್ಯ, ಸಂಸ್ಕಾರ್ಯ ಮತ್ತು ಆಪ್ಯ ಎಂಬ ಚತುರ್ವಿಧ ದ್ರವ್ಯ ವಿಲಕ್ಷಣವಾಗಿರುವುದರಿಂದ ಸಾಧ್ಯವಲ್ಲ; ಸಿದ್ಧವಾದುದು ಸಿದ್ಧವಾಗಿರುವುದನ್ನು ಸಾಧಿಸಲು ಪ್ರಯತ್ನಿಸುವುದು ಅವಿದ್ಯಾ ಮತ್ತು ಅಜ್ಞಾನ ರೂಪವಾದ ಮಾಯೆಯಿಂದ ಪ್ರಚೋದಿತವಾಗಿದೆ.

ಬೌದ್ಧಮತದಲ್ಲಿ ಮಾಯೆ ಆತ್ಮಖ್ಯಾತಿ, ಅಸತ್ಖ್ಯಾತಿ ರೂಪವೆಂದು ಭಾವಿಸಿರುವುದರಿಂದ ಶೂನ್ಯವಾದ ಪ್ರಸಂಗ ಉಂಟಾಗುತ್ತದೆ. ಎಲ್ಲವನ್ನು ಸತ್ಯ, ನಿತ್ಯ, ಅವಿನಾಶಿ ಎಂದು ಭಾವಿಸುವ ಪ್ರಪಂಚದ ಪ್ರಾಚೀನ ಮತ್ತು ನವೀನ ಮತಗಳು ಅಖ್ಯಾತಿ, ಅನ್ಯಥಾಖ್ಯಾತಿ, ಅಖ್ಯಾತಿ ಸಂವಳಿತ ಅನ್ಯಥಾಖ್ಯಾತಿ, ಅಭಿನವ ಅನ್ಯಥಾಖ್ಯಾತಿ ಇತ್ಯಾದಿ ಖ್ಯಾತಿ ವಾದಗಳನ್ನನುಸರಿಸಿ ಮಾಯೆ ಎಂದರೆ ಈಶ್ವರನ ಆವರಣ ವಿಕ್ಷೇಪ ರೂಪಶಕ್ತಿ ಎಂದು ಭಾವಿಸುವುವು. ಅನಿರ್ವಚನೀಯ ಖ್ಯಾತಿಯನ್ನವಲಂಬಿಸಿರುವ ಅದ್ವೈತ ಸಿದ್ಧಾಂತದ ಮಾಯಾವಾದದಲ್ಲಿ ಇತರ ಮತಗಳಿಗೆಲ್ಲ ಸಮನ್ವಯ ಕಂಡುಬರುತ್ತದೆ. ಆದುದರಿಂದ ಭಕ್ತಿ, ಜ್ಞಾನ ಮತ್ತು ಕರ್ಮಮಾರ್ಗಗಳಿಗೆಲ್ಲ ಅಂತಿಮ ಧ್ಯೇಯವಾದ, ತರ್ಕಾತೀತವಾದರೂ ಅನುಭವಸಿದ್ಧವಾದ ಅಸ್ತಿ, ಭಾತಿ, ಪ್ರಿಯಂ ಎಂಬ ಸಗುಣಬ್ರಹ್ಮವು ನಾಮ-ರೂಪ ಎಂಬ ಲಕ್ಷಣಗಳನ್ನುಳ್ಳ ಪ್ರಪಂಚವು ಮಾಯಾವಶಿಷ್ಟ ಚೈತನ್ಯದ ಪ್ರಕಾರಗಳೆಂದು ಹೇಳಲಾಗಿದೆ. ಚಿದಚಿತ್ ವಸ್ತುಗಳು ಪರಿಣಾಮ ಅಥವಾ ವಿವರ್ತ ಅಥವಾ ಅವಿಕಾರಿ ಪರಿಣಾಮ ಇತ್ಯಾದಿಯಾಗಿ ಭಾವಿಸಿದರೂ ಕೊನೆಯಲ್ಲಿ ಅನ್ಯೈಕತ್ವವು ಸಿದ್ಧವಾಗುತ್ತದೆ. ಸಗುಣ ಬ್ರಹ್ಮಾಶ್ರಯವಾದ ಮಾಯೆ, ಜೀವಾಶ್ರಯವಾದ ಅವಿದ್ಯೆ ಒಂದೇ ತತ್ತ್ವದ ದ್ವಿಮುಖಗಳಾದುದರಿಂದ ಮಾಯೆಯನ್ನು ಸ್ಥಾಪಿಸುವುದೂ ನಿರಾಕರಿಸುವುದೂ ಎರಡೂ ಅವಿಚಾರ ರಮಣೀಯವು.

## ಮಾಯೆಯ ವಿವಿಧ ರೂಪ

ಶ್ರೀ ರಾಮಕೃಷ್ಣ ಪರಮಹಂಸರ ಸಾಧನೆಯಲ್ಲಿ ಮಾಯೆಯ ವಿವಿಧ ರೂಪಗಳ ಅಸ್ತಿತ್ವವು ಕಂಡುಬರುತ್ತದೆ. ಯೋಗೇಶ್ವರಿ ಭೈರವಿ ಬ್ರಾಹ್ಮಣಿಯು ಅವರಿಗೆ ಶಾಕ್ತ ದೀಕ್ಷೆಯನ್ನು ವೈಷ್ಣವ ದೀಕ್ಷೆಯನ್ನು ಕೊಟ್ಟು ಮಹಾಮಾಯಾ (ಸ್ಮಶಾನಕಾಳೀ, ದಕ್ಷಿಣಾಕಾಳಿ) ರಹಸ್ಯವನ್ನು, ವಿಷ್ಣು ಮಾಯಾತತ್ತ್ವವನ್ನು ತಿಳಿಯುವಂತೆ

ಮಾಡಿ ತನ್ನ ಮಾಯಾ ಮೋಹಿತ ಚಿತ್ತವನ್ನು ಶುದ್ಧಿಮಾಡಿ ಕೊಡಲು ಶ್ರೀ ರಾಮಕೃಷ್ಣರು ಶಾಕ್ತಾಗಮಗಳಲ್ಲಿ ಹೇಳಿರುವ ವೀರಾಚಾರ–ವಾಮಾಚಾರ ಮಾರ್ಗದಲ್ಲಿಯೂ ಸಾಧನೆ ನಡೆಸಿ ಜಯವನ್ನು ಪಡೆದರು. ಶಂಕರಾಚಾರ್ಯರು ಸೌಂದರ್ಯ ಲಹರಿ, ಪ್ರಪಂಚ ಸಾರ ಇತ್ಯಾದಿ ಶಾಕ್ತ ಗ್ರಂಥಗಳಲ್ಲಿ ನಿರ್ದೇಶಿಸಿರುವ ಸಮಯ ಮಾರ್ಗ ಮತ್ತು ಕೌಲ ಮಾರ್ಗಗಳಿಗೆ ರಾಮಕೃಷ್ಣರು ನಿದರ್ಶಕ ರಾಗಿರುವರು. ಭೈರವೀ ಬ್ರಾಹ್ಮಣಿಯು ವೈದಿಕ ಅಗ್ನಿಚಯನದಲ್ಲಿ ಹೇಳಿದಂತೆ ಐದು ಕಪಾಲಗಳನ್ನು ಸಂಪಾದಿಸಿ ವೇದಿಕೆಯನ್ನು ರಚಿಸಿ ಅದರ ಮೇಲೆ ರಾಮಕೃಷ್ಣರನ್ನು ಸ್ಥಾಪಿಸಿ ದೀಕ್ಷೆಯನ್ನು ಕೊಟ್ಟಳು. ಆತ್ಮ ಸಂಯಮನವನ್ನು ಸಾಧಿಸುವುದಕ್ಕಾಗಿ ರಾಮಕೃಷ್ಣರು ತಮ್ಮ ಪತ್ನಿಯನ್ನೇ ಷೋಡಶಿ ಎಂದು ಪೂಜಿಸಿ ಚಕ್ರ ಪ್ರವೇಶ ಮಾಡಿ ಜಯವನ್ನು ಪಡೆದರು. ಅಂತೆಯೇ ಶೈವ ಮತ್ತು ವೈಷ್ಣವ ಮತಗಳ ರೀತಿಯಲ್ಲೂ ಮಾಯೆಯನ್ನು ಗೆದ್ದರು. ತೋತಾಪುರಿಯ ಉಪ ದೇಶದಿಂದ ಅದ್ವೈತ ಸಿದ್ಧಿಯನ್ನು ಪಡೆದು ಮಾಯೆಯ ಸೌಮ್ಯ ಮತ್ತು ಕ್ರೂರ ರೂಪಗಳನ್ನು ಪರೀಕ್ಷಿಸಿದರು. ಲೋಕ ಸಂಗ್ರಹಕ್ಕಾಗಿ ಮಾಯೆಯ ಆವಶ್ಯಕತೆ, ಮಾಯೆಯಿಂದಲೆ ಮಾಯೆಯನ್ನು ಗೆಲ್ಲುವ ವಿಧಾನ, ವಿಷರೂಪವಾದ ಮಾಯೆಯನ್ನು ಅಮೃತೀ ಕರಣ ಮಾಡುವುದು – ಇವೆಲ್ಲಕ್ಕು ರಾಮಕೃಷ್ಣರ ಲೀಲೆಗಳಲ್ಲಿ ದೃಷ್ಟಾಂತಗಳು ಸಿಕ್ಕುತ್ತವೆ.

ರಾಮಕೃಷ್ಣರ ನಿರ್ಯಾಣಾನಂತರ ಶ್ರೀಶಾರದಾದೇವಿಯವರು ಜುಗುಪ್ಸೆ ಹೊಂದಿ ಜೀವಿಸಿದ್ದು ಸಾರ್ಥಕವೇನು ಎಂದು ಯೋಚಿಸು ತ್ತಿದ್ದಾಗ ಆಕೆಗೆ ರಕ್ತವಸ್ತುಗಳನ್ನು ಧರಿಸಿದ್ದ ಒಬ್ಬ ಕುಮಾರಿಯು ಕಾಣಿಸಿಕೊಂಡಳು. ಭಗವಾನರು ಪ್ರತ್ಯಕ್ಷವಾಗಿ ಅವಳನ್ನು ತೋರಿಸಿ ಶಾರದಾದೇವಿಗೆ ''ಇವಳನ್ನು ಭದ್ರವಾಗಿ ಹಿಡಿ. ನಿನಗೆ ಶಿಷ್ಯರ ಆಕಾರದಲ್ಲಿ ಅನೇಕ ಮಕ್ಕಳಾಗುವರು. ಈ ಕುಮಾರಿಯೇ ಯೋಗಮಾಯೆ'' ಎಂದು ಉಪದೇಶಿಸಿದರು. ಅಘೋರಮಣಿ ದೇವಿ ವೈಷ್ಣವದೀಕ್ಷೆಯನ್ನು ಪಡೆದು ವಿಷ್ಣುಮಾಯೆಯನ್ನು ಅನು ಭವಕ್ಕೆ ತಂದುಕೊಂಡಳು. ಪರಮಹಂಸರ ಅನುಗ್ರಹದಿಂದ ಬಾಲಕೃಷ್ಣನು ಪ್ರತ್ಯಕ್ಷನಾಗಿ ಅಘೋರಮಣಿಯನ್ನು ಯಶೋದೆ ಯೆಂದೂ ಭಾವಿಸಿ ಲೀಲೆಯನ್ನು ತೋರಿಸಿದನೆಂದು ಹೇಳಲಾ ಗಿದೆ. ಹಾಗೆಯೇ ಲಕ್ಷ್ಮೀದೇವಿಯು ಶ್ರೀರಾಮಕೃಷ್ಣರಿಂದ ವೈಷ್ಣವ ದೀಕ್ಷೆ ಪಡೆದು ವಿಷ್ಣುಮಾಯೆಯನ್ನು ತಿಳಿದಳು. ಅಲೌಕಿಕಾನು ಭವಗಳು ವಿವಿಧ ಮತಗಳಲ್ಲಿ ವಿವಿಧ ಇಷ್ಟದೇವತೆಗಳನ್ನು ಆಧಾರ ವಾಗಿ ಪಡೆದಿದ್ದರೂ ಪರಿಣಾಮದಲ್ಲಿ ಒಂದೇ ರೂಪವಾಗಿರುವ ವೆಂದು ಶ್ರೀ ರಾಮಕೃಷ್ಣರು ತೋರಿಸಿರುವರು.

### ಗುರುವಿನ ಆವಶ್ಯಕತೆ

ಗುರುವಿನ ಆವಶ್ಯಕತೆಗೆ ಶ್ರೀರಾಮಕೃಷ್ಣರ ಜೀವನವು ಸಾಕ್ಷಿ ಯಾಗಿದೆ. ಸರ್ವಶಾಸ್ತ್ರ ರಹಸ್ಯಗಳನ್ನು ತಿಳಿದಿದ್ದರೂ ಬ್ರಹ್ಮಜ್ಞಾನಾ ನ್ವೇಷಣೆಯನ್ನು ಸ್ವತಂತ್ರವಾಗಿ ಮಾಡಕೂಡದೆಂದು ಶಂಕರಾ ಚಾರ್ಯರು ಘಂಟಾಘೋಷವಾಗಿ ಹೇಳಿರುವರು **(ಶಾಸ್ತ್ರ ಜ್ಞೋಽಪಿ ನ ಸ್ವಾತಂತ್ರ್ಯೇಣ ಬ್ರಹ್ಮಜ್ಞಾನಾನ್ವೇಷಣಂ ಕುರ್ಯಾತ್)**, ರಾಮಕೃಷ್ಣರಿಗೆ ಪೂರ್ವಸಂಸ್ಕಾರ ಫಲವಾಗಿ ಬಾಲ್ಯದಿಂದಲೇ ಆಧ್ಯಾತ್ಮಿಕ ಜಾಗೃತಿಯಾಗಿದ್ದಿತು. ಆದರೂ ಅವರಿಗುಂಟಾದ ಅನುಭವಗಳ ವಿಷಯದಲ್ಲಿ ಸಾಮಾನ್ಯ ಜನರಿಗೆ ಸಂಶಯ ವಿಮೋಹ ವಿಭ್ರಮಗಳುಂಟಾದುದರಿಂದಲೂ, ಆಕಸ್ಮಿಕವಾಗಿ ವ್ಯಭಿಚಾರಿಭಾವದಂತೆ ತಲೆದೋರಿ ಅದೃಶ್ಯವಾದ ಅವಸ್ಥೆಗಳು ಶಾಶ್ವತ ತತ್ತ್ವಸೂಚಕಗಳೋ ಎಂಬ ಸಂಶಯವು ನಿವಾರಣೆಯಾಗಿ ಸ್ಥಾಯೀಭಾವವನ್ನು ಪಡೆಯಲು ಗುರುವಿನ ಸಹಾಯ ಅನಿ ವಾರ್ಯವಾದುದು. ಅಂತಹ ಗುರು–ಶಿಷ್ಯ ಸಂಬಂಧ ಆಕಸ್ಮಿಕ ವೆಂದು ಕಂಡುಬಂದರೂ ಅನಾದಿಯಾಗಿ ಏರ್ಪಟ್ಟಿದೆ. ಗುರು ವನ್ನು ಶಿಷ್ಯ, ಶಿಷ್ಯನನ್ನು ಗುರು ಹುಡುಕಿಕೊಂಡು ಹೋಗಲೇ ಬೇಕಾಗಿದೆ. ಶ್ರೀರಾಮಕೃಷ್ಣರು ಭೈರವೀಬ್ರಾಹ್ಮಣಿ, ತೋತಾಪುರಿ ಮುಂತಾದವರಿಂದ ತಮ್ಮ ಆಧ್ಯಾತ್ಮಿಕ ಅನುಭವ ವಿಷಯವಾಗಿ ರುಜುವಾತು ಪಡೆದು ಅವತಾರಪುರುಷರೆಂದು ಅಂಗೀಕರಿಸಲ್ಪ ಟ್ಟರು. ಅದ್ವೈತಸಿದ್ಧಿಯನ್ನು ಪಡೆದಮೇಲೆ ಎಲ್ಲ ಮಂತ್ರ ತಂತ್ರ ಗಳ ರಹಸ್ಯಗಳನ್ನು ಅನಾಯಾಸವಾಗಿ ತಿಳಿದು ಎಲ್ಲ ಉಪಾ ಸನೆಗಳಿಗೂ ಅಧಿಕಾರ ಪಡೆದರು. ಶಿಷ್ಯರ ಸಂಸ್ಕಾರವನ್ನು ತಿಳಿದು ಅವರವರ ಯೋಗ್ಯತೆಗೆ ಉಚಿತವಾದ ಸಾಧನಾಕ್ರಮವನ್ನು ವಿಧಿ ಸುವುದರಲ್ಲಿ ಅಲೌಕಿಕ ಜ್ಞಾನ ಪಡೆದಿದ್ದರು. ಉಪನಿಷತ್ತಿನಲ್ಲಿ ಹೇಳಿದಂತೆ ನಾರದನು ಸಮಸ್ತ ಶಾಸ್ತ್ರಗಳನ್ನು ತಿಳಿದರೂ ಮೃತ್ಯು ವನ್ನು ದಾಟಿಸುವ ಜ್ಞಾನಕ್ಕಾಗಿ ಗುರುರೂಪನಾದ ಸ್ಕಂದ ಸನ ತ್ಕುಮಾರನನ್ನು ಆಶ್ರಯಿಸಬೇಕಾಯಿತು. ಶಿಷ್ಯನು ಅನೇಕ ಶಾಸ್ತ್ರ ಗಳಿಂದ ವಿಷಯಗಳನ್ನು ಗುರುವಿಂದ ಅಧಿಕವಾಗಿಯೇ ಕಂಠಸ್ಥ ಬುದ್ಧಿಸ್ಥ ಮಾಡಿಕೊಂಡಿದ್ದರೂ ಗುರುವಿನ ಮೌನ ವ್ಯಾಖ್ಯಾನ ದಿಂದಲೇ ಸಂಶಯಗಳನ್ನು ನಿವಾರಿಸಿಕೊಳ್ಳುವನು. ಕಬೀರ್ ಹೇಳಿದಂತೆ – ನೋಡು ! ನನ್ನೆದುರಿಗೆ ಗುರುವೂ ಹರಿಯೂ ಇಬ್ಬರು ನಿಂತಿರುವರು.

ಯಾರಿಗೆ ಮೊದಲು ನಮಸ್ಕಾರ ಮಾಡಲಿ ?

ಗುರುವಿನ ಪಾದಕ್ಕೆ ಮೊದಲು ಮಾಡು.

ಗುರುವೇ ಅಲ್ಲವೆ ಜ್ಞಾನಜ್ಯೋತಿಯನ್ನು ಬೆಳಗಿಸಿ ಹರಿ ಯನ್ನು ತೋರಿಸಿದುದು? ಗುರುಕೃಪೆ ಇಲ್ಲದೆ ಹರಿಕೃಪೆ ಇಲ್ಲ. ಪರಮಕೃಪಾಳುವಾದ ಗುರು ಶಿಷ್ಯನ ಪಾಪವನ್ನು ತಾನು ಹೊತ್ತು ಕೊಂಡು ಆ ಫಲವನ್ನು ತನ್ನ ದೇಹದಲ್ಲಿ ಅನುಭವಿಸುವನು. ಆದರೆ ಶಿಷ್ಯನ ವ್ಯಕ್ತಿತ್ವಕ್ಕೆ ಲೋಪವಿಲ್ಲ. ಶಿಷ್ಯನ ಸಂಪೂರ್ಣ ವ್ಯಕ್ತಿತ್ವದ ವಿಕಾಸಕ್ಕೆ ಗುರುವಿನ ಅನುಗ್ರಹ ಆವಶ್ಯಕ.

ವಿಶ್ವವೆಲ್ಲ ವ್ಯಷ್ಟಿ–ಸಮಷ್ಟಿಗಳ ಅನುಸ್ಯೂತರೂಪವಾಗಿದೆ. ವಿಶ್ವದಲ್ಲಿ ವ್ಯಕ್ತಿತ್ವವನ್ನು ವ್ಯಕ್ತಿಯಲ್ಲಿ ವಿಶ್ವವನ್ನು ಕಂಡುಹಿಡಿದು ಎಲ್ಲವೂ ಆನಂದಬ್ರಹ್ಮಮಯವೆಂಬುದನ್ನು ಸಾಕ್ಷಾತ್ಕಾರ ಮಾಡಿ ಕೊಳ್ಳುವುದೇ ವೇದಾಂತದ ಧ್ಯೇಯ. ಈ ಪ್ರಾಚೀನ ಭಾರತೀಯ ತತ್ತ್ವವನ್ನು ಆಧುನಿಕ ವೈಜ್ಞಾನಿಕ ಯುಗದಲ್ಲಿ ಪ್ರಚಾರಮಾಡಿ ವಿಶ್ವ ಶಾಂತಿ ಸಂದೇಶವನ್ನು ಅನುಭವಪೂರ್ವಕವಾಗಿ ಪ್ರಸಾರ ಮಾಡಿದ ಗುರುವರ್ಯರೇ ಶ್ರೀ ರಾಮಕೃಷ್ಣ ಪರಮಹಂಸರು. ❋